ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು):

ಅ) ಹೌದು. ಉದ್ದೇಶಿತ ಸ್ಥಳ ಈ ಕೆಳಗಿನಂತಿದೆ. ಉಡುಪಿ ತಾಲ್ಲೂಕಿನ ಮೂಡನಿಡಂಬೂರು ಗ್ರಾಮದ ಸ.ನಂ. 135:1ಎ, 1ಬಿ, 135:1ಎ, 1ಸಿ2 135:1ಎ, 1ಸಿ3, 135:1ಎ, 1ಸಿ, 1ಬಿ, 135:1ಎ, 1ಪಿ, 1ಎ, 135:1ಎ, 1ಸಿ, 1ಎ, 135:1ಎ, 1ಎ, 1ಸಿ ಗಳಲ್ಲಿನ 16.82 ಎಕರೆ ಪ್ರದೇಶಗಳನ್ನು ಆಯ್ಕೆಮಾಡಲಾಗಿದೆ.

ಆ) ನಿವೇಶನದಲ್ಲಿರುವ ವಸತಿಗೃಹಗಳನ್ನು ಕೆಡವಿದ ನಂತರ ಜಿಲ್ಲಾದಿಕಾರಿಗಳ ಕಛೇರಿ ಕಟ್ಟಡ ನಿರ್ಮಾಣ ಕಾರ್ಯ ಕೈಗೆತ್ತಿಕೊಳ್ಳಲಾಗುವುದು. ಇದರ ಅಂದಾಜು ವೆಚ್ಚ ರೂ. 16.60 ಕೋಟಿ

ದ.ಕ. ಜಿಲ್ಲೆಯಲ್ಲಿ ಕುಮ್ಕಿ ಜಮೀನಿನ ಹಕ್ಕನ್ನು ಕ್ರಮ ಗೊಳಿಸುವುದು

2443 (3102) : ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ ಕುಮ್ಕಿ ಹಕ್ಕು ಎಂದರೇನು; ಕುಮ್ಕಿ ಹಕ್ಕು ಮಂಜೂರು ಮಾಡುವ ಮಾನದಂಡ ಯಾವುದು; ಕುಮ್ಕಿ ಹಕ್ಕಿನ ಪರಿಮಿತಿ ಎಷ್ಟು;

ಆ) 1964ನೇ ಇಸವಿಯವರೆಗೆ ಕುಮ್ಕಿ ಹಕ್ಕುಗಳನ್ನು ರೆಗ್ಯೂಲರೈಸ್ ಮಾಡಿದ್ದು, ಅನಂತರ ರೆಗ್ಯುಲರೈಸ್ ಮಾಡದಿರಲು ಕಾರಣವೇನು;

ಇ) ಕುಮ್ಕಿ ಹಕ್ಕು ರೆಗ್ಯೂಲರೈಸ್ ಮಾಡುವುದು ನಿಲ್ಲಿಸುರುವುದರಿಂದ ಗ್ರಾಮಸ್ಥರು ತ್ರಿಶಂಕು ಸ್ಥಿತಿಯಲ್ಲಿರುವುದು ಸರಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಕುಮ್ಕಿ ಹಕ್ಕು ಯಾವ ರೀತಿಯಲ್ಲಿ ಇತ್ಯರ್ಥ ಪಡಿಸಲಾಗುವುದು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು):

ಅ) ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ, ಕುಮ್ಕಿ ಜಮೀನು ಕುಮ್ಕಿದಾರರ ಹಕ್ಕು ಹಾಗೂ ಈ ಜಮೀನುಗಳ ಮಂಜೂರಾತಿ ಬಗ್ಗೆ ಹಳೇ ಮದ್ರಾಸ್ ಪ್ರಾಂತ್ಯದ ಬೋರ್ಡ್ ಆಫ್ ರೆವಿನ್ಯೂ ಆದೇಶದಲ್ಲಿ ನಿರ್ಮಹಿಸಲಾಗಿದೆ. ಅದರ ಪ್ರಕಾರ 1276ರ ಪಾಸ್ಲಿ (ಅಂದರೆ ಕ್ರಿಸ್ತಶಕ 1886)ರಂದು ಖಾತೆದಾರರು ಹೊಂದಿರುವ ಜಮೀನಿಗೆ 100 ಗಜ ದೂರದಲ್ಲಿರುವ ಸರ್ಕಾರಿ ಬಂಜರು ಜಮೀನನ್ನು ಕುಮ್ಕಿ ಜಮೀನೆಂದು ಕರೆಯಲಾಗಿದೆ. ಈ ಆದೇಶದನ್ವಯ ಕುಮ್ಕಿದಾರರು ಕುಮ್ಕಿ ಜಮೀನಿನಲ್ಲಿ ತಮ್ಮ ಹಸುಗಳನ್ನು ಮೇಯಿಸಲು ಸೊಪ್ಪು, ಸೋದೆಗಳನ್ನು ಸಂಗ್ರಹಿಸಲು ಹಾಗೂ ಮನೆಯ ಮತ್ತು ಕೃಷಿ ಉದ್ದೇಶಕ್ಕಾಗಿ ಮರಗಳನ್ನು ಉಪಯೋಗಿಸುವ ಹಕ್ಕುಗಳನ್ನು ಹೊಂದಿರುತ್ತಾರೆ. ಕುಮ್ಕಿ ಮಿತಿಯಲ್ಲಿರುವ ಜಮೀನನ್ನು ಕುಮ್ಕಿದಾರರು ತಾತ್ಕಾಲಿಕವಾಗಿ ಸಾಗುವಳಿ ಮಾಡಬಹುದು. ಸಾಗುವಳಿ ಮಾಡಿದಲ್ಲಿ ಈ ಜಮೀನಿಗೆ ಹಕ್ಕಲ್ ನೀಡಬೇಕಿರುವುದಿಲ್ಲ. ಕುಮ್ಕಿ ಜಮೀನು ಖಾತೆದಾರರು ಹೊಂದಿರುವ ಜಮೀನಿನ ಎರಡರಷ್ಟು ವಿಸ್ತೀರ್ಣಕ್ಕೆ ಮಿತಿ ಹೊಂದಿರುತ್ತದೆ.

ಆ) ಸರ್ಕಾರದ ಪತ್ರ ಸಂ: ಆರ್‌ಡಿ 94 ಬಿಎನ್‌ಎ 69, ದಿನಾಂಕ 13.3.1971ರ ಸರ್ಕಾರಿ ಪತ್ರದಲ್ಲಿ ರಾಜ್ಯಗಳ ಪುನರ್ ವಿಂಗಡನೆಯಾಗುವುದಕ್ಕೆ ಮುಂಚೆ ಕುಮ್ಕಿ ಜಮೀನುಗಳ ಮಂಜೂರಾತಿಗೆ ಇದ್ದಂತೆ ಅವಕಾಶವನ್ನು ಸರ್ಕಾರದ ಸುತ್ತೋಲೆ ಸಂಖ್ಯೆ : ಆರ್‌ಡಿ 5 ಎಲ್‌ಜಿಯು 72, ದಿ: 17.5.73ರಲ್ಲಿ ಹಿಂತೆಗೆದುಕೊಳ್ಳಲಾಗಿದೆ. ಅಂದಿನಿಂದ ಕುಮ್ಕಿ ಜಮೀನುಗಳ ಮಂಜೂರಾತಿಯನ್ನು ನಿಲ್ಲಿಸಲಾಗಿದೆ.

ಇ) ಇಲ್ಲ.

ಈ) ಕುಮ್ಕಿ ಜಮೀನುಗಳ ಅಕ್ರಮ ಸಾಗುವಳಿಯನ್ನು ಕರ್ನಾಟಕ ಭೂ ಕಂದಾಯ 1964ರ ಕಲಂ 94(ಬಿ) ಅನ್ವಯ ಸಕ್ರಮಗೊಳಿಸಲು ಅವಕಾಶ ಕಲ್ಪಿಸಲಾಗಿದೆ.